ಇಸ್ತಿಹಾರ್.

ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 7ನೇ ಜನವರಿ 1896.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ ೧೮೭೮ನೇ ಇಸವಿ ಜೂ್ 8ನೇ ತಾರೀಖಿನ ಫಾರೆಸ್ಟ್ ರೂಲು 13ನೇ ಸೆಕ್ಷನ್ ಅನುಸರಿಸಿ, ಈ ಕೆಳಗೆ ನಮೂದಿರುವ ಸ್ಟೇಟ್ಟು ಮತ್ತು ರಿಜರ್ವ್ ಫಾರೆಸ್ಟ್ಟುಗಳು ಮತ್ತು ಪ್ಲಾಂಟೇಷನ್ಗಳು 1896ನೇ ಇಸವಿ ಫಿಬ್ರವರಿ 1ರ ಲಾಗಾಯಿತು 1896ನೇ ಇಸವಿ ಮೇ ಆಖೈರುವರಿಗೆ ಬಿಸಲು ಕಾಲದಲ್ಲಿ ಜನಗಳಿಗೆ ಬಂದು ಮಾಡಲ್ಪಟ್ಟಿರುತ್ತೆ.

2. ಈ ಮೇಲ್ಕಂಡ ಕಾಲದಲ್ಲಿ ಯಾವ ವಿಧವಾದ ಷಿಕಾರಿಯೂ ನಿರೋಧಿಸಲ್ಪಟ್ಟಿದೆ. ಅತಿಕ್ರಮ ಪ್ರವೇಶ ಮಾಡುವರು ಪೀನಲ್ ಕ್ಯೂರ್ಷಗೆ ಗುರಿಯಾದಾರು.

ನಂಬರ್.	ಸ್ಟೇಟ್ಟು ಮತ್ತು ರಿಜರ್ವ್ ಫಾರೆಸ್ಟ್ಟುಗಳು ಮತ್ತು ಪ್ಲಾಂಟೇಷನ್ಗಳ ಹೆಸರು.	ತಾಲ್ಲೂಕು.
I	ಫಾರೆಸ್ಟ್ಟುಗಳು.	
1	ನಂದೀದುರ್ಗ	ಚಿಕ್ಕಬಳ್ಳಾಪುರ
2	ನರಸಿಹ್ಮದೇವರ ಬೆಟ್ಟ	ಡಿಟೋ, ಗೋರೀಬಿದನೂರು ಗುಡಿಬಂಡೆ ಮತ್ತು ಸಬ್ ತಾಲ್ಲೂಕು
3	ಕಾಮಸಂದ್ರ ಜಂಗಲ್ ಮತ್ತು ಅದರಲ್ಲಿರುವ ಪ್ಲಾಂಟೇಷನ್ಗಳು	ಬೌರಿಂಗ್‌ಪೇಟೆ ಮತ್ತು ಮಾಲೂರು
4	ರಾಯಲ್‌ಪಾಡು, ಅಡ್ಡಗಲ್ಲು, ನೆಲವಂಕಿ ಜಂಗಲ್‌ಗಳು ಮತ್ತು ಅವುಗಳಲ್ಲಿರುವ ಪ್ಲಾಂಟೇಷನ್ಗಳು	ಚಿಂತಾಮಣಿ ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು
5	ಶ್ರೀನಿವಾಸಪುರ ಯೆಲ್ಲೂರು ಜಂಗಲ್ ಮತ್ತು ಅವುಗಳಲ್ಲಿರುವ ಪ್ಲಾಂಟೇಷನ್ಗಳು	ಶ್ರೀನಿವಾಸಪುರ ಸಬ್ ತಾಲ್ಲೂಕು ಮತ್ತು ಮುಳಬಾಗಲು
6	ಅಗರದ ಜಂಗಲ್	ಮುಳಬಾಗಲು
7	ಹೊಸೂರು, ಅಣಜಗಾನಹಳ್ಳಿ, ಪಾಳ್ಯಿಗಾರ್ ಪೊದೆ	ಶ್ರೀನಿವಾಸಪುರ ಸಬ್ ತಾಲ್ಲೂಕು
8	ಇಟಿಕಲ್ ದುರ್ಗ ಫಾರೆಸ್ಟ್	ಬಾಗೇಪಲ್ಲಿ
9	ವಲಸೆ ಫಾರೆಸ್ಟ್	ಗೋರೀಬಿದನೂರು
10	ಗೆದರೆಬೆಟ್ಟ ಮತ್ತು ಯೆಮ್ಮಗುಟ್ಟು ಜಂಗಲ್‌ಗಳು (ಸಂದಲ್‌ವೇರಾವಾಗಿ ರತಕ್ಕ ಪ್ರದೇಶಮಾತ್ರವೆ)	ಡಿಟೋ
II	ಪ್ಲಾಂಟೇಷನ್ಗಳು.	
11	ನಂದಿ	ಚಿಕ್ಕಬಳ್ಳಾಪುರ
12	ಸುಲಾಲಪ್ಪನದಿನ್ನೆ	ಡಿಟೋ
13	ಗಾಜಲದಿನ್ನೆ	ಕೋಲಾರ
14	ಸಂಗಂಡನಹಳ್ಳಿ	ಡಿಟೋ
15	ಮಾಲೂರು	ಮಾಲೂರು
16	ಬೀಚಗಾನಹಳ್ಳಿ	ಗುಡಿಬಂಡೆ ಸಬ್ ತಾಲ್ಲೂಕು
17		ಶಿಡ್ಲಘಟ್ಟ
18	ತಿರುಮಲಯ್ಯನದಿನ್ನೆ	ಡಿಟೋ
19	ಚವುಡಸಂದ್ರ	ಡಿಟೋ
20	ಗೊರವಮಡುಗು	ಡಿಟೋ
21	ಯಲ್ಲಂಪಲ್ಲಿ	ಬಾಗೇಪಲ್ಲಿ

ಬಿ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ನೋಟಿಸ್.

ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ತಾರೀಖು 26ನೇ ಡಿಸೆಂಬರ್ 1895ನೇ ಇಸವಿ.

1890ನೇ ಇಸವಿ ಫೆಬ್ರವರಿ 1ನೇ ತಾರೀಖಿನ ಮೈಸೂರ ಗೆಜೆಟ್ 2ನೇ ಭಾಗ 26ನೇ ಪುಟದಲ್ಲಿ ಪಾಯಿಷ್ ಮಾಡಿರುವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ನೋಟಿಫಿಕೇಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,

ಈ ಕೆಳಗೆ ನಮೂದಿಸಿರುವ ತುಮಕೂರು ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳನ್ನ 1896ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು ಮೇ ಆಖೈರುವರಿಗೂ ಬಂದ್ ಮಾಡಲ್ಪಟ್ಟಿರುತ್ತೆ.